ಓ.ಎಸ್. ನಂ. 51/2019

ಪಿ.ಡಬ್ಲ್ಯೂ: 1

ದಿನಾಂಕಃ- 19-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 14 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್. ಕೆ. ಎಸ್. ರವರಿಂದಃ**

ದಾವಾಸ್ತಿಯ ಹಳೇ ಸರ್ವೆ ನಂಬರ್ 76/ಪಿ 16 ಎಂದರೆ ನಿಜ. ದಾವಾಸ್ತಿಯ ಒಟ್ಟು ವಿಸ್ತೀರ್ಣ 18 ಗುಂಟೆ ಕರಾರು ಜಮೀನು ಸೇರಿಸಿ 5 ಎಕರೆ ಎಂದರೆ ನಿಜ. ದಾವಾಸ್ತಿ ಮೂಲತಃವಾಗಿ ಸರ್ಕಾರದಿಂದ ರಾಜಮ್ಮ ಕೋಂ ರತ್ನ ಗೌಂಡರ್ ಇವರಿಗೆ ಮಂಜೂರಾಗಿದ್ದು ಎಂದರೆ ನಿಜ. ಸದರಿ ರತ್ನ ಮತ್ತು ರಾಜಮ್ಮ ಇವರಿಗೆ 3 ಗಂಡು ಮತ್ತು 1 ಹೆಣ್ಣು ಮಕ್ಕಳು ಎಂದರೆ ನಿಜ. ಹೆಣ್ಣು ಮಗಳು ಇವಗ ಜೀವಂತೆ ಇಲ್ಲ ಎಂದರೆ ನಿಜ. ಹೆಣ್ಣು ಮಗಳಾದ ಅನ್ನಪೂರ್ಣೆ ಇವರ ವಾಸುದಾರರಾದ ನಾನು ಈ ಕೇಸಿನಲ್ಲಿ ಪಾರ್ಟಿ ಮಾಡಿಲ್ಲ. 3 ಜನ ಗಂಡು ಮಕ್ಕಳೆಂದರೆ 1. ಮಾಣಿಕ್ಯಂ 2. ನನ್ನ ತಂದೆ ಆದ ವಡಿವೆಲ್ ಹಾಗೂ 3 ನೇ ಯವರು ಎಂದರೆ ಈ ಕೇಸಿನ 4 ನೇ ಪ್ರತಿವಾದಿ. 1 ನೇ ಪ್ರತಿವಾದಿ ಮಾಣಿಕ್ಯಂ ಅವರ ಹೆಂಡತಿ ಎಂದರೆ ನಿಜ. 2 ಮತ್ತು 3 ನೇ ಪ್ರತಿವಾದಿಗಳು ಮಾಣಿಕ್ಯಂ ಹಾಗೂ 1 ನೇ ಪ್ರತಿವಾದಿಯ ಮಕ್ಕಳೆಂದರೆ ನಿಜ. ರತ್ನ ಮತ್ತು ರಾಜಮ್ಮ ಇವರ ಮರಣ ನಂತರ ಅವರ ಮೂರು ಗಂಡು ಮಕ್ಕಳು ದಾವಾಸ್ತಿಗಳ ಮೌಖಿಕ ವಿಭಾಗ ಮಾಡಿಕೊಂಡರು ಎಂದರೆ ನಿಜ. ಸದರಿ ಮೌಖಿಕ ವಿಭಾಗ ಪತ್ರದಲ್ಲಿ ದಾವಾಸ್ತಿಯಲ್ಲಿ ಮಾಣಿಕ್ಯಂ ಇವರಿಗೆ 1 ಎಕರೆ 20 ಗುಂಟೆ ಹೋಗಿರುತ್ತದೆ ಎಂದರೆ ನಿಜ. ಅದೇ ಮೌಖಿಕ ವಿಭಾಗದಲ್ಲಿ ನನ್ನ ತಂದೆ ವಡಿವೆಲ್ ರವರಿಗೆ 1 ಎಕರೆ 27 ಗುಂಟೆ ಜಮೀನು ಹೋಯಿತು ಎಂದರೆ ನಿಜ. 3 ನೇ ಮಗ ಅಂದರೆ 4 ಪ್ರತಿವಾದಿಗೆ ಉಳಿದ ಹಿಸ್ಸೆ ಎಂದರೆ 1 ಎಕರೆ 25 ಗುಂಟೆ ಹೋಗಿರುತ್ತದೆ ಎಂದರೆ ನಿಜ. ಮಾಣಿಕ್ಯಂ ಆತನಿಗೆ ಬಂದ 1 ಎ 28 ಗು ಜಮೀನ ನ್ನ ಬ್ಯಾಂಕಿನಲ್ಲಿ ಅಡ ಇಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲವನ್ನು ಮಾಣಿಕ್ಯಂ ತೀರಿಸದೆ ಇದುದ್ದರಿಂದ ಬ್ಯಾಂಕಿನವರು ಮಾಣಿಕ್ಯಂ ವಿರುದ್ಧ ವಸೂಲಿ ದಾವೆ ಹಾಕಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆ ಬ್ಯಾಂಕಿನ ಪರ ನಿರ್ಣಯ ಆಗಿ

ಸದರಿ 1 ಎ 28 ಗು ಜಮೀನು ಹರಾಜು ಆಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನ್ನ ಸ್ವಂತಕ್ಕೆ ಗೊತ್ತಿದ್ದರೂ ಕೂಡ ನನಗೆ ಗೊತ್ತಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬ್ಯಾಂಕ್ ಹಾಕಿದ ದಾವೆಯ ಹರಾಜಿನಲ್ಲಿ 1 ಎ 28 ಗು ಜಮೀನಿನ ಒಬ್ಬ ಎ ನಾರಾಯಣ ರೆಡ್ಡಿ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹರಾಜಿನಲ್ಲಿ ನ್ಯಾಯಾಲಯವು ಸದರಿ 1 ಎ 28 ಗು ಜಮೀನಿನ ಸ್ವಾಧೀನವನ್ನು ಸದರಿ ನಾರಾಯಣ ರೆಡ್ಡಿಗೆ ಕೊಟ್ಟಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ನಾರಾಯಣ ರೆಡ್ಡಿ ಇವರು ಹರಾಜಿನಲ್ಲಿ ಬಂದ ಸದರಿ ಜಮೀನ ನ್ನ ದಿನಾಂಕ 14.11.1979 ರಂದು ಅಂದರೆ ನಿಡಿ–1 ರ ಮೂಲಕ ಒಬ್ಬ ಗೋಪಾಲ್ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಕ್ಕೆ ಅಂದರೆ ನಿಡಿ-1 ಕ್ಕೆ ಮಾಣಿಕ್ಯಂ ಇವರು ಸಾಕ್ಷಿ ಅಂತ ಸಹಿ ಹಾಕಿದ್ದಾರೆ ಅಂತ ನಿಡಿ–1 ನ್ನು ತೋರಿಸಿ ಸೂಚಿಸಿದ್ದು ಸಾಕ್ಷಿ ಮಾಣಿಕ್ಯಂ ಇವರಿಗೆ ಓದಲೂ ಬರೆಯಲು ಬರುತ್ತಲಿಲ್ಲ ಎನ್ನುತ್ತಾರೆ. ಸಾಕ್ಷಿ ನಿಡಿ–1 ನ್ನು ನೋಡಿ ಅದರಲ್ಲಿ ಸಾಕ್ಷಿಯ ಸಹಿ ಅಂತ ತಮಿಳಿನಲ್ಲಿ ಬರೆಯಲಾಗಿದೆ ಅಂತ ನೋಡಿ ಒಪ್ಪಿದು ಆದರೆ ಅದು ಮಾಣಿಕ್ಯಂ ಅವರ ಸಹಿ ಅಂತ ಸೂಚಿಸಿದ್ದು ಸಾಕ್ಷಿ ನಿರಾಕರಿಸುತ್ತಾರೆ. ನಿಡಿ–1 ರ ದಾಖಲಾತಿಯನ್ನು ನಾನಾಗಲಿ ಅಥವಾ ನನ್ನ ಹಿರಿಯರು ಆಗಲಿ ಪ್ರಶ್ನೆ ಮಾಡಿಲ್ಲ, ಸಾಕ್ಷಿ ಸ್ವತಃ ಹೇಳುತ್ತಾರೆ ನನಗೆ ಸದರಿ ವಿಷಯ 2018 ರಲ್ಲಿ ಗೊತ್ತಾಯಿತು ಹಾಗೂ 2019 ರಲ್ಲಿ ಪ್ರಸ್ತುತ ದಾವೆ ಹಾಕಿದ್ದೇನೆ. ಸದರಿ ಗೋಪಾಲ್ ಇವರನ್ನು ನಾನು ಈ ಕೇಸಿನಲ್ಲಿ ಪಾರ್ಟಿ ಮಾಡಿಲ್ಲ. ದಿನಾಂಕ 17.4.1997 ರಂದು ಗೋಪಾಲ್ ಈತನು ನಿಡಿ–1 ರ ಆಸ್ತಿಯನ್ನು 13 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 13 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯ ಪತ್ರವನ್ನು ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 2018 ರಲ್ಲಿ ಗೊತ್ತಾದರೂ ಕೂಡ ನಾನು ಪ್ರಶ್ನೆ ಮಾಡಿರುವುದಿಲ್ಲ ಅಂದರೆ ಸಾಕ್ಷಿ ಒಟ್ಟಾರೆಯ ಪ್ರಸ್ತುತ ದಾವೆಯನ್ನು ಹಾಕಿದ್ದೇನೆ ಎನ್ನುತ್ತಾರೆ. ಪ್ರಸ್ತುತ ದಾವೆಯನ್ನು ನಾನು ಪಾಲು ಕೇಳಿ ಹಾಕಿದ್ದೇನೆ ಹೊರತು ಕ್ರಯ ಪತ್ರದ ರದ್ದತಿಗೆ ಹಾಕಿರುವುದಿಲ್ಲ

ಅಂದರೆ ಸಾಕ್ಷಿಯು ಒಟ್ಟಾರೆಯಾಗಿ ಹಾಕಿದ್ದೇನೆ ಎನ್ನುತ್ತಾರೆ. ತದನಂತರ 13 ನೇ ಪ್ರತಿವಾದಿ ಸದರಿ ಆಸ್ತಿಯನ್ನು 14 ನೇ ಪ್ರತಿವಾದಿಗೆ ದಿನಾಂಕ 15.09.2015 ರಂದು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಸದರಿ ವಿಷಯ 2019 ರಲ್ಲಿ ನನಗೆ ಗೊತ್ತಾಯಿತು ಎನ್ನುತ್ತಾರೆ. ಗೊತ್ತಾದ ನಂತರ ಸದರಿ ಕ್ರಯ ಪತ್ರವನ್ನು ಪ್ರಶ ಮಾಡಿದ್ದೀರಾ ಎಂದರೆ ಸಾಕ್ಷಿಯು ಎಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ ಎನ್ನುತ್ತಾರೆ. ಸದರಿ ಎಸಿ ನ್ಯಾಯಾಲಯದಲ್ಲಿ ಒಟ್ಟಾರೆಯಾಗಿ ಅರ್ಜಿ ಹಾಕಿದ್ದೇನೆ. ಸದರಿ ಎಸಿ ನ್ಯಾಯಾಲಯದಲ್ಲಿಯ ಪ್ರಕರಣದ ಸಂಖ್ಯೆ ನನಗೆ ಗೊತ್ತಿಲ್ಲ ಆದರೆ ನಮ್ಮ ವಕೀಲರಿಗೆ ಗೊತ್ತು. ಎಸಿ ನ್ಯಾಯಾಲಯದಲ್ಲಿ ಪ್ರಕರಣ ಹಾಕಿದ್ದೇನೆ ಅಂತ ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಕೊಟ್ಟಿಲ್ಲ ಅಂದರೆ ಸಾಕ್ಷಿಯು ನಮ್ಮ ವಕೀಲರು ಎಲ್ಲಾ ಮಾಡಿದ್ದೇನೆ ಅಂತ ಹೇಳಿದ್ದರು ಎನ್ನುತ್ತಾರೆ. ಅಂತಹ ಯಾವುದೇ ದಾಖಲಾತಿಯನ್ನು ನಮ್ಮ ವಕೀಲರು ಈ ಕೇಸಿನಲ್ಲಿ ಹಾಕಿದ್ದಾರಾ ಅಥವಾ ಇಲ್ಲ ಎಂಬುದು ನನ್ನ ಸ್ವಂತಕ್ಕೆ ಗೊತ್ತಿಲ್ಲ. 14 ನೇ ಪ್ರತಿವಾದಿ ನಿಡಿ–1 ರ ಆಸ್ತಿಯನ್ನು ಖರೀದಿ ಮಾಡಿದ ನಂತರ ಅದರಲ್ಲಿ ಬೋರ್ ವೆಲ್ ಹಾಕಿದ್ದಾರೆ ಎಂದರೆ ಸಾಕ್ಷಿಯು ಅದು ಆ ಸರ್ವೆ ನಂಬರ್ ನಲ್ಲಿ ಬರುವುದಿಲ್ಲ ಎನ್ನುತ್ತಾರೆ. ಬೇರೆ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದರೆ 15 ರ ಸರ್ವೆ ನಂಬರ್ ನಲ್ಲಿ ಬರುತ್ತದೆ ಎನ್ನುತ್ತಾರೆ. ಸರ್ವೆ ನಂಬರ್ 15 ರ ಮಾಲೀಕರು ನಾವೇ ಇದ್ದೇವೆ. ಸರ್ವೆ ನಂಬರ್ 15 ರ ಆಸ್ತಿ ಈಗ ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ ಹಾಗೂ ಹುಡುಕಬೇಕು. ಸರ್ವೆ ನಂಬರ್ 15 ರ ಆಸ್ತಿ ಕೂಡ ನಮ್ಮ ಹಿರಿಯರ ಆಸ್ತಿ. ಸರ್ವೆ ನಂಬರ್ 15 ರ ಆಸ್ತಿಯ ವಿಸ್ತೀರ್ಣ ಎಷ್ಟು ಎಂಬುದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ 15 ರ ಆಸ್ತಿಯನ್ನು ಈ ಕೇಸಿನಲ್ಲಿ ತೋರಿಸಿಲ್ಲ. 14 ನೇ ಪ್ರತಿವಾದಿ ತನ್ನ ಜಮೀನಿನಲ್ಲಿ ಕೊರೆಸಿದ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕೋರಿ ತಹಸೀಲ್ದಾರ್ ಮತ್ತು ಸಂಬಂಧಪಟ್ಟ ಇಲಾಖೆಗೆ ಅರ್ಜಿ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಹಸೀಲ್ದಾರ್ ಇವರು 14 ನೇ ಪ್ರತಿವಾದಿಯ ಅರ್ಜಿಯನ್ನು ಸಂಸ್ಕರಣೆ ಮಾಡಿ ಸದರಿ ಕೊಳವೆ ಬಾವಿಗೆ 14 ನೇ

ಪ್ರತಿವಾದಿಯ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಕೊಡಿಸಬಹುದು ಅಂತ ಪ್ರಮಾಣ ಪತ್ರ ಕೊಟ್ಟಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಮಾಣ ಪ್ತರದ ಅನ್ವಯ ಬೆಸ್ಕಾಂ ಅಧಿಕಾರಿಗಳು ನಿಡಿ-1 ರ ಆಸ್ತಿಗೆ ಬೇಟಿ ಕೊಟ್ಟು ವೀಕ್ಷಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವೀಕ್ಷಣೆ ಮಾಡಿದ ತರವಾಯ ಬೆಸ್ಕಾಂ ಕಂಪನಿಯವರು ಸದರಿ ಬೋರ್ ವೆಲ್ ಗೆ ವಿದ್ಯುತ್ ಸಂಪರ್ಕವನ್ನು ದಿನಾಂಕ 22.12.2008 ರಂದು ಸೂಚನಾ ಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ 14 ನೇ ಪ್ರತಿವಾದಿ ಸದರಿ ಜಮೀನಿನಲ್ಲಿ ಸದರಿ ಕೊಳವೆ ಬಾವಿಯ ನೀರನ್ನು ಉಪಯೋಗಿಸಿ ರಾಗಿ, ಭತ್ತ, ಮತ್ತು ಶೇಂಗಾ ಮತ್ತು ಇತರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ಸಾಕ್ಷಿಯು ಬೆಳೆಗಳನ್ನು ನೋಡಿದ್ದೇನೆ ಆದರೆ 14 ನೇ ಪ್ರತಿವಾದಿ ಬೆಳೆದ ವಿಷಯ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಜಮೀನಿನಲ್ಲಿ ಬೇರೆ ಯಾರೂ ಬೆಳಗಳನ್ನು ಬಳೆದಿದ್ದಕ್ಕೆ ನಾನು ಏನಾದರು ಪೋಲೀಸ್ ದೂರನ್ನು ಕೊಟ್ಟಿಲ್ಲ ಅಂದರೆ ಸಾಕ್ಷಿಯು ದೂರನ್ನು ಕೊಟ್ಟಿಲ್ಲ ಆದರೆ ಪ್ರಸ್ತುತ ದಾವೆಯನ್ನು ಹಾಕಿದ್ದೇನೆ ಎನ್ನುತ್ತಾರೆ. 15 ನೇ ಸರ್ವೆ ನಂಬರ್ ನ ಆಸ್ತಿಯಲ್ಲಿ ಬೇರೆ ಯಾರೋ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂಬ ವಿಷಯನ್ನು ಈ ದಾವೆಯಲ್ಲಿ ಕಾಣಿಸಿಲ್ಲ. ನಿಡಿ-1 ರ ಜಾಗದಲ್ಲಿ 14 ನೇ ಪ್ರತಿವಾದಿ ಒಂದು ಮನೆಯನ್ನು ಕಟ್ಟಿದ್ದಾರೆ ಎಂದರೆ ನಿಜ. ಆ ವಿದ್ಯುತ್ ಸಂಪರ್ಕವು ಸಹ ಇದೇ ಎಂದರೆ ಸಾಕ್ಷಿಯುು ಸುಮ್ಮನೇ ಇರುತ್ತಾರೆ. ತದನಂತರ ವಕೀಲರು ಇನ್ನೊಮ್ಮೆ ಕೇಳಿದಾಗ ವಿದ್ಯುತ್ಚ್ಛಕ್ತಿ ಇರುವುದಿಲ್ಲ ಎನುತ್ತಾರೆ. ಪ್ರಸ್ತುತವಾಗಿ ನಿಡಿ-1 ರ ಜಮೀನಿನಲ್ಲಿ 14 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾನೆ ಎಂದರೆ ನಿಜ. ನಿಡಿ-1 ರ ಆಸ್ತಿಯು ಈಗಲೂ ಕೂಡ ಹಳೇ ಸರ್ವೆ ನಂಬರ್ 76/ಪಿ16 ರಲ್ಲಿಯೇ ಇದೆ ಎಂದರೆ ನಿಜ. ಈ ಎಲ್ಲಾ ವಿಷಯಗಳು ನನ್ನ ಸ್ವಂತಕ್ಕೆ ಗೊತ್ತಿದ್ದರೂ ನಾನು ಗೊತ್ತಿಲ್ಲ ಅಂತ ಸುಳ್ಳು ಹೇಳಿ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಕೂಡ ನಿಡಿ-1 ರ ಜಮೀನಿನ ಪಹಣಿಗಳಲ್ಲಿ 14 ನೇ ಪ್ರತಿವಾದಿಯ ಹೆಸರು ಇದೆ ಎಂದರೆ ಸರಿಯಲ್ಲ. 14 ನೇ ಪ್ರತಿವಾದಿಗೆ ತೊಂದರೆ ಕೊಡುವ ದುರುದ್ದೇಶದಿಂದ ನಾನು ಅವರನ್ನು ಈ ಕೇಸಿನಲ್ಲಿ

ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಮೂಲತಃ ವಾಗಿ ಮಾಣಿಕ್ಯಂ ಅವರಿಗೆ, ಬ್ಯಾಂಕಿಗೆ ನಂತರ ಹರಾಜಿನಲ್ಲಿ ನಾರಾಯಣ ರೆಡ್ಡಿಗೆ ನಂತರ ಗೋಪಾಲ್ ಈಗ 14 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ನಿಡಿ–1 ರ ಜಮೀನಿನಲ್ಲಿ ನಾನಾಗಲೀ ಅಥವಾ ನನ್ನ ಉಳಿದ ಕುಟುಂಬದ ಸದಸ್ಯರಿಗಾಗಲಿ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ . ಜಿ.ಟಿ.ಆರ್. ರವರಿಂದ**

**ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರೆದ ಪಾಟೀಸವಾಲನ್ನು ಮುಂದುವರೆಸಿರುತ್ತಾರೆ**

ರತ್ನ ಗೌಂಡರ್ ತೀರಿ ಹೋಗುವಾಗ ನಾನು ಹುಟ್ಟಿರಲಿಲ್ಲ. ರತ್ನ ಇವರ ಹೆಂಡತಿಯಾದ ರಾಜಮ್ಮ ಇತವರು ತೀರಿ ಹೋದ 15 ದಿನಗಳ ತರುವಾಯು ನಾನು ಹುಟ್ಟಿದ್ದೇನೆ. ದಾವಾ ಆಸ್ತಿ 1942 ರಲ್ಲಿ ರತ್ನ ಗೌಂಡರ್ ಇವರಿಗೆ ಮಂಜೂರು ಆಗಿದೆ ಎಂದರೆ ನಿಜ. ಮಂಜೂರಾತಿ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ . ದಾವಾಸ್ತಿಯ ಸರ್ವೆ ನಂಬರ್ ಎಷ್ಟು ಎಂದರೆ ಸಾಕ್ಷಿಯು ಹಳೆಯ 76/ಪಿ16 ಹಾಗೂ ಅದನ್ನು ಈಗ 132 ಅಂತ ಪೋರ್ಜ್ ಮಾಡಿದ್ದಾರೆ ಎನ್ನುತ್ತಾರೆ. ದಾವಾಸ್ತಿಯ ಸರ್ವೆ ಆಗಿರುವುದಿಲ್ಲ. 8 ನೇ ಪ್ರತಿವಾದಿ ದಾವಾಸ್ತಿಯಲ್ಲಿಯ 1 ಎ 27 ಗು ಜಮೀನನ್ನ ಮೊದಲು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ತಂದನಂತರ 10 ನೇ ಪ್ರತಿವಾದಿ ಸದರಿ ಆಸ್ತಿಯನ್ನು 11 ನೇ ಪ್ರತಿವಾದಿಗೆ ತದನಂತರ 11 ನೇ ಪ್ರತಿವಾದಿ ಸದರಿ ಆಸ್ತಿಯನ್ನು 12 ನೇ ಪ್ರತಿವಾದಿಗೆ ಹಾಗೂ ತದನಂತರ 12 ನೇ ಪ್ರತಿವಾದಿ ಸದರಿ ಆಸ್ತಿಯನ್ನು 13 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ರತ್ನ ಮತ್ತು ರಾಜಮ್ಮ ತೀರಿ ಹೋದ ನಂತರ ದಾವಾಸ್ತಿಯ ಪಹಣಿ ಯಾರ ಹೆಸರಿನಲ್ಲಿ ಬಂತು ಎಂದರೆ ಸಾಕ್ಷಿಯು 3 ಎ 6 ಗು ಜಮೀನಿನ ಪಹಣಿ ನನ್ನ ತಂದೆ ವಡಿವೇಲು ಅವರ ಹೆಸರಿನಲ್ಲಿ ಇದೆ ಎನ್ನುತ್ತಾರೆ. ನನ್ನ ತಂದೆ ವಡಿವೇಲು 2018 ರಲ್ಲಿ ತೀರಿ ಹೋದರು. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ

ಕೊಟ್ಟಿದ್ದೇನೆ. . 4 ನೇ ಪ್ರತಿವಾದಿ ದಾಖಲಾತಿಗಳನ್ನು ಬನಾವಟ್ ಮಾಡಿ ಜಂಟಿ ಆಸ್ತಿಯನ್ನು ಮಾರಾಟ ಮಾಡಿದ್ದಾನೆ ಅಂತ ಹೇಳಿದ್ದು ಆ ದಾಖಲಾತಿಗಳನ್ನು ನಾನು ಎಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ. ಈಗ ಮೇಲೇ ಹೇಳಿದ 1 ಎ 27 ಗು ಜಮೀನಿನ ಪಹಣಿಯಲ್ಲಿ 12 ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ಸಾಕ್ಷಿಯು ಬರುತ್ತಿದೆ ಆದ್ದರಿಂದಲೇ ಈ ದಾವೆ ಹಾಕಿದ್ದೇನೆ ಎನ್ನುತ್ತಾರೆ. ಸುಮಾರು 2019 ರಲ್ಲಿ 12 ನೇ ಪ್ರತಿವಾದಿ ದಾವಾಸ್ತಿಗೆ ಬಂದು ಕೃತಾವಳಿಗಳನ್ನು ಮಾಡುವಾಗ ನನಗೆ ಸದರಿ ವಿಷಯ ಗೊತ್ತಾಯಿತು. 12 ನೇ ಪ್ರತಿವಾದಿಯ ಹೆಸರು ದಾವಾಸ್ತಿಯಲ್ಲಿ 2 ಎ 35 ಗು ಜಮೀನು (18 ಗು ಖರಾಬನ್ನು ಹೊರತುಪಡಿಸಿ) ಪಹಣಿಯಲ್ಲಿ ಬರುತ್ತಿದೆ ಎಂದರೆ ನಿಜ. ರತ್ನ ಮತ್ತು ರಾಜಮ್ಮ ಇವರು ತೀರಿಹೋದ ನಂತರ ದಾವಾಸ್ತಿಯ ಪಹಣಿಗಳಲ್ಲಿ ಅವರ ಮಕ್ಕಳ ಹೆಸರು ನಮೂದು ಆಗಿರುವುದಿಲ್ಲ. ಎಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ಮತ್ತು ಪ್ರಸ್ತುತ ದಾವೆಯನ್ನು ಹೊರತುಪಡಿಸಿ ನಾನು 14 ನ ಪ್ರತಿವಾದಿಯ ಕ್ರಯ ಪತ್ರವನ್ನು ನಾನು ಬೇರೆ ಎಲ್ಲಿಯು ಪ್ರಶ್ನೆ ಮಾಡಿಲ್ಲ. ಈಗ ದಾವಾಸ್ತಿಯ ಪಹಣಿಯಲ್ಲಿ 12 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ. ನನ್ನ ತಂದೆಗೆ ನನ್ನನ್ನು ಸೇರಿಸಿ ಒಟ್ಟು 8 ಜನ ಮಕ್ಕಳು. ನಾನು ಈ ಕೇಸಿನಲ್ಲಿ ನನ್ನ ಪರವಾಗಿ ಮಾತ್ರ ಸಾಕ್ಷಿ ಹೇಳುತ್ತಿದ್ದೇನೆ. 8 ನೇ ಪ್ರತಿವಾದಿ ಕೆ.ಜಿ.ಎಫ್. ನಲ್ಲಿ ಒಬ್ಬ ಉನ್ನತ ಬಂಗಾರದ ವ್ಯಾಪಾರಿ ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಗೆ ನಾನು ಹೋಗಿ 10 ಲಕ್ಷ ರೂಪಾಯಿ ಕೊಟ್ಟ ಪ್ರಸ್ತುತ ಕೇಸು ವಾಪಸ್ಸು ಪಡೆಯುತ್ತೇನೆ ಅಂತ ಹೇಳಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ ಆದ್ದರಿಂದ ಅಂತಹ ಪ್ರಸಂಗವೇ ಬರುವುದಿಲ್ಲ ಎನ್ನುತ್ತಾರೆ. ದಾವಾಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಇಲ್ಲದಿದ್ದರೂ ಕೂಡ ಪ್ರತಿವಾದಿಗಳಿಗೆ ತೊಂದರೆ ಕೊಡುವ ದುರುದ್ದೇಶದಿಂದ ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸರಿ ಇದೆ

**(ಮಹೇಶ ಶಂ.ಪಾಟೀಲ)**
ಹಿರಿಯ ಸಿ.ಜೆ ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್